145



# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್–8647/2015

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿನಾಂಕ: 13/03/2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ಶಿಫಾರಸ್ಸು ವರದಿ

ವಿಷಯ: 3ನೇ ಎದುರುದಾರರಾದ ಶ್ರೀ ಸೋಮಶೇಖರ್, ಬಿಲ್ ಕಲೆಕ್ಟರ್ ರವರು ಸರ್ಕಾರಿ ನೌಕರರಾಗಿರುವುದಿಲ್ಲ, ಈ ಸಂಬಂಧ ಸದರಿಯವರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮಾವಳಿಗಳಡಿಯಲ್ಲಿ ಕ್ರಮ ಜರುಗಿಸಲು ಸಾದ್ಯವಿಲ್ಲದೇ ಇರುವ ಕಾರಣ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳಲು ಹಾಗೂ ದೂರುದಾರರು ಮತ್ತು 3ನೇ ಎದುರುದಾರರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಿಸಿರುವುದನ್ನು ಕಾನೂನು ರೀತ್ಯಾ ತೆರವುಗೊಳಿಸುವ ಬಗ್ಗೆ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ವರದಿಯ ನಡವಳಿಕೆ–ಕುರಿತು.,

*****

ಶ್ರೀ ಕೆ.ಎನ್.ನಾಗೇಶ್ ಬಿನ್ ಲೇಟ್ ನರಸಿಂಹೇಗೌಡ, ಹೊಸಕನ್ನಂಬಾಡಿ ಗ್ರಾಮ, ಚಿನಕುರಳಿ ಹೋಬಳಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ ಚಂದ್ರಮೌಳಿ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ, (2) ಶ್ರೀಮತಿ ಶಶಿಕಲಾ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಟ್ಟೇರಿ ಗ್ರಾಮ ಪಂಚಾಯತ್, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ಮತ್ತು, (3) ಶ್ರೀ ಸೋಮಶೇಖರ್, ಬಿಲ್ ಕಲೆಕ್ಟರ್, ಕಟ್ಟೇರಿ ಗ್ರಾಮ ಪಂಚಾಯತ್, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ '1 ರಿಂದ 3ನೇ ಎದುರುದಾರರುಗಳು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದಾಖಲಿಸಿ ದೂರುದಾರರಿಗೆ ಸೇರಿದ ಸಂಖ್ಯೆ: 72ರ ಅಳತೆ 53/2 ಮತ್ತು ನಿವೇಶನ ಸಂಖ್ಯೆ: 71ರ ಅಳತೆ 53/1ರ ನಿವೇಶನಗಳನ್ನು ಅವರ ಹೆಸರಿಗೆ ಖಾತೆ ಮಾಡಿಕೊಡುವಂತೆ

124b



ದಿನಾಂಕ: 18/09/2014 ರಂದು ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿರುತ್ತಾರೆಂದು, ದಿನಾಂಕ: 02/12/2014 ರಂದು ಸಥಳ ಪರಿಶೀಲನೆ ಮಾಡಿ ನಿವೇಶನ ಸಂಖ್ಯೆ: 71ರ ಅಳತೆ 53/1ರ ಜಾಗದಲ್ಲಿ 3ನೇ ಎದುರುದಾರರಾದ ಶ್ರೀ ಸೋಮಶೇಖರ್ ರವರು ಮನೆಯನ್ನು ನಿರ್ಮಿಸಿದ್ದು, ಉಳಿದಂತೆ ಸದರಿಯವರ ನಿವೇಶನದ ಜಾಗವನ್ನು ಆಕ್ರಮಿಸಿಕೊಂಡು ಶೌಚಾಲಯವನ್ನು ನಿರ್ಮಿಸಿಕೊಂಡು ತೆರವುಗೊಳಿಸದೇ, ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸದೇ ಉದ್ಧಟತನದಿಂದ ವರ್ತಿಸುತ್ತಿದ್ದಾರೆಂದು ಆಪಾದಿಸಿರುತ್ತಾರೆ. ಮತ್ತೆ ಮುಂದುವರೆದು ಸದರಿ ಪ್ರಕರಣದಲ್ಲಿ ದೂರುದಾರರ ತಾಯಿಯ ಹೆಸರಿಗೆ ಮಂಜೂರಾಗಿರುವ ಆಶ್ರಯ ಮನೆಯ ನಿವೇಶನವು 39 * 39 ಅಳತೆಯಿದ್ದು, ದೂರುದಾರರ ಜಾಗದಲ್ಲಿ ಅಕ್ರಮವಾಗಿ ಕಟ್ಟಿರುವ ಶೌಚಾಲಯವನ್ನು ತೆರವುಗೊಳಿಸುವಂತೆ ಕೋರಿದ್ದರು ದುರುದ್ದೇಶದಿಂದ ನಿವೇಶನಗಳ ಚೆಕ್ಕುಬಂದಿ ಮತ್ತು ಉದ್ದ ಅಗಲದ ಅಳತೆಯನ್ನು ಬದಲಾವಣೆ ಮಾಡಿ ಉದ್ಧಟತನದಿಂದ ವರ್ತಿಸಿರುತ್ತಾರೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರ ದೂರಿಗೆ ಸಂಬಂಧಪಟ್ಟಂತೆ 1 ರಿಂದ 3ನೇ ಎದುರುದಾರರುಗಳು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ದೂರುದಾರರು ಸಲ್ಲಿಸಿರುವ ದೂರು ಮತ್ತು ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿ, ಎರಡು ಒಂದಕ್ಕೆ ಒಂದು ತಾಳೆ ಇರುವುದಿಲ್ಲ. ಆದ್ದರಿಂದ, ದೂರುದಾರರ ದೂರಿಗೆ ಸಂಬಂಧಪಟ್ಟಂತೆ ಕೂಲಂಕಷವಾಗಿ ತನಿಖೆ ನಡೆಸಿ ವಿವರವಾದ ವರದಿಯನ್ನು ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ರವರಿಗೆ ತಿಳಿಸಲಾಗಿರುತ್ತದೆ.

3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ರವರು ದಿನಾಂಕ: 04/01/2017ರ ಪತ್ರದ ರೀತ್ಯಾ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ, ದೂರುದಾರರಾದ ಶ್ರೀ ನಾಗೇಶ್ ರವರು ಸಲ್ಲಿಸಿರುವ ಕ್ರಮ ಸಂಖ್ಯೆ: 72 ಆಸ್ತಿ ಸಂಖ್ಯೆ: 53/2ಕ್ಕೆ ಸಂಬಂಧಿಸಿದಂತೆ ಪೂರಕ ದಾಖಲೆಗಳನ್ನು ಒದಗಿಸಿಕೊಟ್ಟಲ್ಲಿ ಗ್ರಾಮ ಪಂಚಾಯತಿಯು ಶ್ರೀ ನಾಗೇಶ್ ರವರಿಗೆ ಖಾತೆ ಮಾಡಿಕೊಡಲು ಸಿದ್ಧವಿರುತ್ತದೆಂದು ತಿಳಿಸಿರುತ್ತಾರೆ. ಇದು ಅಲ್ಲದೇ, ಆಸ್ತಿ ನಂ. 53/1 ಮತ್ತು 53/3 ದೂರುದಾರರ ಆಸ್ತಿಗಳಾಗಿದ್ದು, ಗ್ರಾಮ ಠಾಣಾ ಜಾಗವನ್ನು

147

ಒತ್ತುವರಿ ಮಾಡಿ ನಿರ್ಮಿಸಿರುವುದು ಕಂಡುಬರುತ್ತದೆ. ಹಾಗೂ ದೂರುದಾರರಾದ ಶ್ರೀ ಕೆ.ಎನ್.ನಾಗೇಶ್ ರವರ ಆಸ್ತಿಯ ಪಶ್ಚಿಮ ಭಾಗಕ್ಕೆ ಇರುವ ಗ್ರಾಮ ಠಾಣಾಖಾಲಿ ನಿವೇಶನ ಪೂ–ಪ 24, ಉತ್ತರ–ದಕ್ಷಿಣ 40 1/2 ಅಡಿ ಜಾಗವನ್ನು ಒತ್ತುವರಿಯಾಗಿ ಮಾಡಿಕೊಂಡು, ಹೊಸದಾಗಿ ಆರ್.ಸಿ.ಸಿ. ಮನೆ ನಿರ್ಮಿಸಿರುವುದು ಕಂಡುಬರುತ್ತದೆಂದು ತಿಳಿಸಿರುತ್ತಾರೆ.

4. ಮತ್ತೆ ಮುಂದುವರೆದು, ದೂರುದಾರರು ದೂರಿನಲ್ಲಿ ನಮೂದಿಸಿರುವಂತೆ, ಕಟ್ಟೇರಿ ಗ್ರಾಮ ಪಂಚಾಯತಿಯ ಹಾಲಿ ಬಿಲ್ ಕಲೆಕ್ಟರ್ ಶ್ರೀ ಸೋಮಶೇಖರ್ ರವರ ತಂದೆಯಾದ ಶ್ರೀ ನಿಂಗೇಗೌಡ ಬಿನ್ ಕಾಳೇಗೌಡ ರವರ ಹೆಸರಿನಲ್ಲಿರುವ ಖಾತೆ ನಂ. 25/1ರ ಗ್ರಾಮ ಪಂಚಾಯತಿ ಆಸ್ತಿ ವಹಿಯಲ್ಲಿ 39 * 39 ಅಡಿ ಎಂದಿದ್ದು, ಅವರು ಉತ್ತರ–ದಕ್ಷಿಣ 69 ಮತ್ತು ಪೂರ್ವ–ಪಶ್ಚಿಮ 39 ಅಡಿ ಜಾಗದಲ್ಲಿ ಮನೆ ನಿರ್ಮಿಸಿದ್ದು, ಉತ್ತರ–ದಕ್ಷಿಣ 30 ಅಡಿ ಒತ್ತುವರಿಯಾಗಿರುವುದಲ್ಲದೇ ಸದರಿಯವರು ನಿರ್ಮಿಸಿರುವ ಶೌಚಾಲಯವು ಕೂಡ ಒತ್ತುವರಿಯಾಗಿರುತ್ತದೆಂದು ತಿಳಿಸಿರುತ್ತಾರೆ.

5. ದೂರುದಾರರು ಸಲ್ಲಿಸಿರುವ ದೂರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ದೂರುದಾರರು ಹಾಗೂ ಹಾಲಿ ಬಿಲ್ ಕಲೆಕ್ಟರ್ (3ನೇ ಎದುರುದಾರರು) ರವರುಗಳು ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಿಸಿರುವುದು ಕಂಡುಬರುತ್ತದೆ. ಸದರಿ ಒತ್ತುವರಿಯನ್ನು ಗುರುತಿಸಿ ತೆರೆವುಗೊಳಿಸಬೇಕಾಗಿದ್ದು ಎದುರುದಾರರುಗಳು ಆದ್ಯ ಕರ್ತವ್ಯವಾಗಿರುತ್ತದೆ. ಆದರೆ, ಇದುವರೆವಿಗೂ ಸದರಿ ಒತ್ತುವರಿಯನ್ನು ತೆರೆವುಗೊಳಿಸಿರುವುದು ಕಂಡುಬರುವುದಿಲ್ಲ.

6. ಆದ್ದರಿಂದ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ರವರು ಸಲ್ಲಿಸಿರುವ ವರದಿಯನ್ನು 1 ರಿಂದ 3ನೇ ಎದುರುದಾರರುಗಳಿಗೆ, ದೂರುದಾರರಿಗೆ ಹಾಗೂ ಹಾಲಿ ಸದರಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಮುಖ ಪುಟದಲ್ಲಿ 4 ಮತ್ತು 5ನೇ ಎದುರುದಾರರನ್ನಾಗಿ implead ಮಾಡಿ, ನಂತರ 1 ರಿಂದ 5ನೇ ಎದುರುದಾರರುಗಳಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

148



7. ಈ ಸಂಬಂಧ, 2 ಮತ್ತು 4ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ದೂರಿನ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಪ್ರಸ್ತುತ ಹಂತದಲ್ಲಿ ಸದರಿ 2 ಮತ್ತು 4ನೇ ಎದುರುದಾರರುಗಳ ಆಕ್ಷೇಪಣೆಗಳನ್ನು ಒಪ್ಪಲಾಗುವುದಿಲ್ಲ. ಹಾಗೂ 1, 3 ಮತ್ತು 5ನೇ ಎದುರುದಾರರುಗಳು ಈ ಕಛೇರಿಯಿಂದ ಕಳುಹಿಸಲಾದ ಪತ್ರವನ್ನು ಸ್ವೀಕರಿಸಿದರೂ ಸಹಾ, ಇದುವರೆವಿಗೂ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, 1, 3 ಮತ್ತು 5ನೇ ಎದುರುದಾರರಿಗೆ ದೂರುದಾರರ ದೂರಿನ ಮೇಲೆ ಏನು ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ, ಗೌರವಾನ್ವಿತ ಉಪಲೋಕಾಯುಕ್ತರ ಕಂಡಿಕೆ 53ರ ಆದೇಶದ ಮೇರೆಗೆ 1, 3 ಮತ್ತು 5ನೇ ಎದುರುದಾರರ ಆಕ್ಷೇಪಣೆಗಳೇನು ಇರುವುದಿಲ್ಲವೆಂದು ಪರಿಗಣಿಸಿ, ಕಡತವನ್ನು ಅಂತಿಮ ಪರಿಶೋಧನೆ ಟಿಪ್ಪಣಿಗಾಗಿ post ಮಾಡಲಾಗಿದೆ.

8. ದೂರಿನಲ್ಲಿ ಇರುವ ಆಪಾದನೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ 1 ರಿಂದ 5ನೇ ಎದುರುದಾರರುಗಳು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

- ದೂರುದಾರರಾದ ಶ್ರೀ ನಾಗೇಶ್ ರವರು ಸಲ್ಲಿಸಿರುವ ಕ್ರಮ ಸಂಖ್ಯೆ: 72 ಆಸ್ತಿ ಸಂಖ್ಯೆ: 53/2ಕ್ಕೆ ಸಂಬಂಧಿಸಿದಂತೆ ಪೂರಕ ದಾಖಲೆಗಳನ್ನು ಒದಗಿಸಿಕೊಟ್ಟಲ್ಲಿ ಗ್ರಾಮ ಪಂಚಾಯತಿಯು ಶ್ರೀ ನಾಗೇಶ್ ರವರಿಗೆ ಖಾತೆ ಮಾಡಿಕೊಡಲು ಸಿದ್ದವಿರುತ್ತದೆಂದು ತಿಳಿಸಿರುತ್ತಾರೆ.

- ಆಸ್ತಿ ನಂ. 53/1 ಮತ್ತು 53/3 ದೂರುದಾರರ ಆಸ್ತಿಗಳಾಗಿದ್ದು, ದೂರುದಾರರು ಗ್ರಾಮ ಠಾಣಾ ಜಾಗವನ್ನು ಒತ್ತುವರಿ ಮಾಡಿಕೊಂಡು ನಿರ್ಮಿಸಿರುತ್ತಾರೆ ಹಾಗೂ ಇದು ಅಲ್ಲದೇ, ಅವರ ಆಸ್ತಿಯ ಪಶ್ಚಿಮ ಭಾಗಕ್ಕೆ ಇರುವ ಗ್ರಾಮ ಠಾಣಾ ಖಾಲಿ ನಿವೇಶನ ಪೂ–ಪ 24, ಉತ್ತರ–ದಕ್ಷಿಣ 40 1/2 ಅಡಿ ಜಾಗವನ್ನು ಸಹಾ ಒತ್ತುವರಿಯಾಗಿ ಮಾಡಿಕೊಂಡು, ದೂರುದಾರರು ಹೊಸದಾಗಿ ಆರ್.ಸಿ.ಸಿ. ಮನೆ ನಿರ್ಮಿಸಿರುವುದು ಕಂಡುಬರುತ್ತದೆ. ಹಾಗೂ ಸದರಿ ಒತ್ತುವರಿಯನ್ನು ಇದುವರೆವಿಗೂ ತೆರೆವುಗೊಳಿಸದೇ ಇರುವುದು ಸಹಾ ಕಂಡುಬರುತ್ತದೆ.

149

- ದೂರುದಾರರು ದೂರಿನಲ್ಲಿ ನಮೂದಿಸಿರುವಂತೆ, ಕಟ್ಟೇರಿ ಗ್ರಾಮ ಪಂಚಾಯತಿಯ ಹಾಲಿ ಬಿಲ್ ಕಲೆಕ್ಟರ್ ಶ್ರೀ ಸೋಮಶೇಖರ್ (3ನೇ ಎದುರುದಾರರು) ರವರ ತಂದೆಯಾದ ಶ್ರೀ ನಿಂಗೇಗೌಡ ಬಿನ್ ಕಾಳೇಗೌಡ ರವರ ಹೆಸರಿನಲ್ಲಿರುವ ಖಾತೆ ನಂ. 25/1ರ ಗ್ರಾಮ ಪಂಚಾಯತಿ ಆಸ್ತಿ ವಹಿಯಲ್ಲಿ 39 * 39 ಅಡಿ ಎಂದಿದ್ದು, ಅವರು ಉತ್ತರ-ದಕ್ಷಿಣ 69 ಮತ್ತು ಪೂರ್ವ-ಪಶ್ಚಿಮ 39 ಅಡಿ ಜಾಗದಲ್ಲಿ ಮನೆ ನಿರ್ಮಿಸಿದ್ದು, ಉತ್ತರ-ದಕ್ಷಿಣ 30 ಅಡಿ ಒತ್ತುವರಿ ಮಾಡಿಕೊಂಡಿರುವುದಲ್ಲದೇ, ಶೌಚಾಲಯವನ್ನು ಸಹಾ ಅಕ್ರಮವಾಗಿ ಒತ್ತುವರಿ ಮಾಡಿಕೊಂಡ ಜಾಗದಲ್ಲಿ ನಿರ್ಮಿಸುವ ಮೂಲಕ ಕರ್ತವ್ಯ ಲೋಪವೆಸಗಿರುತ್ತಾರೆ.
- 3ನೇ ಎದುರುದಾರರು ಗ್ರಾಮ ಪಂಚಾಯತ್‌ನಲ್ಲಿ ಬಿಲ್ ಕಲೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿಯವರೇ, ಅಕ್ರಮವಾಗಿ ಗ್ರಾಮ ಠಾಣಾ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆ ಹಾಗೂ ಶೌಚಾಲಯ ನಿರ್ಮಿಸುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- 2 ಮತ್ತು 4ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿದ್ದು, ಗ್ರಾಮದಲ್ಲಿನ ಆಗು ಹೋಗುಗಳ ಬಗ್ಗೆ, ಅಕ್ರಮ ಒತ್ತುವರಿಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಆಗ್ಗಿಂದಾಗೆ ಕಾನೂನು ರೀತ್ಯಾ ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುವುದು 2 ಮತ್ತು 4ನೇ ಎದುರುದಾರರುಗಳ ಆಧ್ಯ ಕರ್ತವ್ಯ ವಾಗಿರುತ್ತದೆ. ಆದರೆ, 2 ಮತ್ತು 4ನೇ ಎದುರುದಾರರುಗಳು ಸದರಿ ಅಕ್ರಮ ಒತ್ತುವರಿಯ ಬಗ್ಗೆ ಇದುವರೆವಿಗೂ ಕಾನೂನು ರೀತ್ಯಾ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- 1 ಮತ್ತು 5ನೇ ಎದುರುದಾರರುಗಳು ದೂರುದಾರರ ದೂರಿನ ಬಗ್ಗೆ ಕ್ರಮ ವಹಿಸುವಂತೆ 2 ಮತ್ತು 4ನೇ ಎದುರುದಾರರುಗಳಿಗೆ ಸೂಚಿಸುವುದು ಹಾಗೂ ಸರ್ಕಾರಿ ಜಾಗವನ್ನು ಯಾರು ಅತಿಕ್ರಮಣ ಮಾಡದಂತೆ ಕಾನೂನು ರೀತ್ಯಾ ಸೂಕ್ತ ಕ್ರಮ ವಹಿಸುವುದು 1 ಮತ್ತು 5ನೇ ಎದುರುದಾರರುಗಳ ಆಧ್ಯ ಕರ್ತವ್ಯವಾಗಿರುತ್ತದೆ. ಆದರೆ, 1 ಮತ್ತು 5ನೇ ಎದುರುದಾರರು ಸದರಿ ಒತ್ತುವರಿಯನ್ನು ತೆರವುಗೊಳಿಸದೇ ಇರುವ ಬಗ್ಗೆ

150



ಇದುವರೆವಿಗೂ ಕಾನೂನು ರೀತ್ಯಾ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

9. ದೂರುದಾರರು ದೂರು ಹಾಗೂ ಲಗತ್ತಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ '1, 2, 4 ಮತ್ತು 5ನೇ ಎದುರುದಾರರುಗಳು' ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, '1, 2, 4 ಮತ್ತು 5ನೇ ಎದುರುದಾರರುಗಳು' ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

10. 3ನೇ ಎದುರುದಾರರಾದ ಶ್ರೀ ಸೋಮಶೇಖರ್, ಬಿಲ್ ಕಲೆಕ್ಟರ್ ರವರು ಸರ್ಕಾರಿ ನೌಕರರಾಗಿರುವುದಿಲ್ಲ, ಈ ಸಂಬಂಧ ಸದರಿಯವರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮಾವಳಿಗಳಡಿಯಲ್ಲಿ ಕ್ರಮ ಜರುಗಿಸಲು ಸಾಧ್ಯವಿಲ್ಲದೇ ಇರುವ ಕಾರಣ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳಲು ಹಾಗೂ ದೂರುದಾರರು ಮತ್ತು 3ನೇ ಎದುರುದಾರರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಿಸಿರುವುದನ್ನು ಕಾನೂನು ರೀತ್ಯಾ ತೆರೆವುಗೊಳಿಸುವ ಬಗ್ಗೆ ಸೂಕ್ತ ಕ್ರಮ ವಹಿಸಲು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 26/3/17.

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು–2,
ಕರ್ನಾಟಕ ರಾಜ್ಯ, ಬೆಂಗಳೂರು.

Sd/- 13/3/17